ಸಿ.ಸಿ .ನಂ. 574/2018 ಪಿಡಬ್ಲೂಃ 1

ದಿನಾಂಕಃ 21-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

6. ಕೃಷ್ಣ ನೀಲಕಂಠ ಗಾವಡಿ ನಮ್ಮ ಸಂಬಂಧಿಕರು ಎಂದರೆ ಸರಿ . ಅವರ ಬಳಿ ನನ್ನ ಅಣ್ಣ ಸುಮಾರು ಬಾರಿ ಸಾಲವನ್ನು ಪಡೆದಿದ್ದರು ಎಂದರೆ ಸರಿಯಲ್ಲ . ನನ್ನ ಅಣ್ಣ ತೀರಿಕೊಂಡ ನಂತರ ಕೃಷ್ಣ ನೀಲಕಂಠ ಗಾವಡಿ ತೀರಿಕೊಂಡಿದ್ದಾರೆ ಎಂದರೆ ಸರಿ . ನನ್ನ ಅಣ್ಣ ತೀರಿಕೊಂಡಾಗ ಒಂದು ಪರಿಹಾರ ಬಂದಿತ್ತು . ಪರಿಹಾರ ಬಂದ ನಂತರ ಕೃಷ್ಣ ನೀಲಕಂಠ ಗಾವಡಿಯವರಿಗೆ ನೀಡುವ ಹಣವನ್ನು ಕೊಡುತ್ತೇನೆ ಎಂದು ನನ್ನ ತಂದೆ ಹೇಳಿದ್ದರು ಎಂದರೆ ಸರಿಯಲ್ಲ . ಕೃಷ್ಣ ನೀಲಕಂಠ ಗಾವಡಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಕೃಷ್ಣ ನೀಲಕಂಠ ಗಾವಡಿ ನನ್ನ ದೊಡ್ಡಮ್ಮನ ಮಗ ಆಗಬೇಕು . ನನ್ನ ದೊಡ್ಡಮ್ಮನ ಮಗ ಹೇಗೆ , ಯಾವ ಕಾರಣದಿಂದ ತೀರಿಕೊಂಡಿದ್ದ ಗೊತ್ತಿಲ್ಲ. ಕೃಷ್ಣ ನೀಲಕಂಠ ಗಾವಡಿ ಹಾಗೂ ನಮ್ಮ ಅಣ್ಣ ಇಬ್ಬರು ಒಟ್ಟಿಗೆ ವ್ಯವಹಾರ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಈ ಪ್ರಕರಣ ದಾಖಲಾದ ನಂತರ ಆರೋಪಿ ನನ್ನ ಅಣ್ಣ ಹಾಗೂ ಕೃಷ್ಣ ನೀಲಕಂಠ ಗಾವಡಿಯವರ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ನಾನು ಕೃಷ್ಣ ಪುರುಷೋತ್ತಮ ಗಾವಡಿಯವರಿಂದ ಯಾವುದೇ ಹಣವನ್ನು ಪಡದುಕೊಂಡಿಲ್ಲ , ಅವರು ನನ್ನ ಚೆಕ್ ನ್ನು ಕೃಷ್ಣ ನೀಲಕಂಠ ಗಾವಡಿಯಿಂದ ಹೇಗೋ ಪಡೆದುಕೊಂಡಿದ್ದಾರೆ ಎಂದು ದೂರನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೋಲಿಸರು ಇಬ್ಬರನ್ನು ಕರೆಸಿ ವಿಚಾರಣೆ ಮಾಡಿದಾಗ ಆಗ ಇಬ್ಬರು ಹೌದು ಎಂದು ಒಪ್ಪಿಕೊಂಡು ಇನ್ನೂ ಮುಂದೆ ಪ್ರಕರಣ ಮುಂದುವರೆಸುವುದಿಲ್ಲ , ಪ್ರಕರಣವನ್ನು ಹಿಂಪಡೆಯುತ್ತೇವೆ ಎಂದು ಠಾಣೆಯಲ್ಲಿ ಹೇಳಿದ್ದರು ಎಂದರೆ ಸರಿಯಲ್ಲ . ನನ್ನ ಅಣ್ಣ ಆರೋಪಿಗೆ ಹಣ ಕೊಟ್ಟಿದ್ದಾನೆ ಎಂದು ತೋರಿಸಲು ನನ್ನ ಬಳಿ ದಾಖಲಾತಿ ಇಲ್ಲ ಎಂದರೆ ಸರಿ . ಅದೇ ರೀತಿ

ಯಾವುದೇ ಸಾಕ್ಷಿದಾರರ ಮುಂದೆ ಹಣ ಕೊಟ್ಟ ಬಗ್ಗೆ ಸಾಕ್ಷಿದಾರರಿಲ್ಲ ಎಂದರೆ ಸರಿ . ಚೆಕ್ ನ್ನು ಆರೋಪಿ ನಮ್ಮ ಅಣ್ಣನಿಗೆ ಕೊಟ್ಟಿದ್ದಾರೆ ಎಂದು ಹೇಳಲು ಯಾವುದೇ ಸಾಕ್ಷಿದಾರರು ಇಲ್ಲ ಎಂದರೆ ಸಾಕ್ಷಿ ಸಾಕ್ಷಿದಾರರು ಇಲ್ಲ , ಆದರೆ ಅವರು ಹೇಳಿದ್ದರು ಎಂದು ನುಡಿದಿರುತ್ತಾರೆ . ನ್ಯಾಯಾಲಯದ ಮುಂದೆ ಇರುವ ದಾಖಲಾತಿಗಳ ಬರವಣಿಗೆ ನನ್ನ ಮುಂದೆ ಆಗಿಲ್ಲ ಎಂದರೆ ಸರಿ . ಕಾರಣ ಅದನ್ನು ಯಾರು ಬರೆದರು ಹೇಳಲು ಆಗುವುದಿಲ್ಲ ಎಂದರೆ ಸರಿ . ಪೋಲಿಸ್ ಠಾಣೆಯಲ್ಲಿ ಪ್ರಕರಣವನ್ನು ಹಿಂಪಡೆಯುತ್ತೇನ ಹೇಳಿದ ನಂತರ ಇವತ್ತು ಹಿಂಪಡೆಯುತ್ತೇನೆ ನಾಳೆ ಹಿನಪಡೆಯುತ್ತೇನೆ ಎಂದು ಸಬೂಬು ಹೇಳುತ್ತಾ ಬಂದಿದ್ದರು ಎಂದರೆ ಸರಿಯಲ್ಲ. ಪೋಲಿಸ್ ಠಾಣೆಯಲ್ಲಿ ಕೊಟ್ಟ ಮಾತಿನಂತೆ ನಡೆದುಕೊಳ್ಳುವ ಸಂದರ್ಭದಲ್ಲಿಯೇ ಅವರು ಅಚಾನಕಾಗಿ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ . ಆ ಕಾರಣಕ್ಕೆ ಪ್ರಕರಣ ನ್ಯಾಯಾಲಯದಲ್ಲಿ ಉಳಿದು ಬಂದಿತ್ತು ಎಂದರೆ ಸರಿಯಲ್ಲ . ನನ್ನ ಅಣ್ಣ ಮರಣ ಹೊಂದಿದ ನಂತರ ವಕೀಲರ ಹೇಳಿದ ನಂತರ ನನ್ನ ತಂದೆ ತಾಯಿ ಬಂದು ಈ ಪ್ರಕರಣದಲ್ಲಿ ಅವರನ್ನು ಸೇರಿಸಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ಅದಕ್ಕಿಂತ ಮೊದಲು ನಾನು ವಕೀಲರ ಬಳಿ ಹೋಗಿದ್ದೆ ಎಂದು ನುಡಿದಿರುತ್ತಾರೆ. ಮೊದಲನೇ ಬಾರಿ ತಂದೆಯವರು ಇದ್ದುದರಿಂದ ವಕೀಲರು ಹೇಳಿದ್ದರಿಂದ ನನ್ನನ್ನು ಪ್ರಕರಣಕ್ಕೆ ಸೇರಿಸಿರಲಿಲ್ಲ. ನನ್ನ ತಂದೆ ತೀರಿಕೊಂಡ ನಂತರ ವಾರಸಾ ನಾತೆಯಿಂದ ನಾನು ಈ ಪ್ರಕರಣವನ್ನು ಮುಂದುವರೆಸುತ್ತಿದ್ದೇನೆ. ನ್ಯಾಯಾಲಯದಲ್ಲಿ ಹಾಜರು ಪಡಿಸಿದ ಎಲ್ಲಾ ದಾಖಾತಿಗಳನ್ನು ನನ್ನ ಅಣ್ಣನೇ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ಹಾಜರು ಪಡಿಸಿದ್ದಾರೆ ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ನಾನು ನೋಡಿಲ್ಲ . ದಾಖಲಾತಿಗಳನ್ನು ನೋಡದೇ ಇರುವುದರಿಂದ ಅದರ ಮೇಲಿರುವ ಬರವಣಿಗಿ ಯಾರದ್ದು , ಸಹಿ ಯಾರದ್ದು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ . ನನ್ನ ಅಣ್ಣ ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನನಗೆ ನ್ಯಾಯಯುತವಾಗಿ ಪ್ರಕರಣ ಮುಂದುವರೆಸಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ . ಆರೋಪಿ ಕಾನೂನಾನುಬದ್ಧವಾಗಿ ಯಾವುದೇ ಹಣವನ್ನು ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ . ಈ

ಪಿಡಬ್ಲೂಃ 1

ಪ್ರಕರಣದಲ್ಲಿ ಫಿರ್ಯಾದಿಯಾಗಿ ದಾಕ್ಷಾಯಿಣ , ಗೀತಾ ಇವರನ್ನು ಸಾಕ್ಷಿಯನ್ನಾಗಿ ಮಾಡಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಅವರು ಪ್ರಕರಣಕ್ಕೆ ಸಂಬಂಧವಿಲ್ಲ ಎಂದು ನುಡಿದಿರುತ್ತಾರೆ . ನಾನು ಕೂಡ ಪ್ರಕರಣಕೆಕ ಸಂಬಂಧವಿಲ್ಲ ಎಂದರೆ ಸರಿಯಲ್ಲ . ಅದೇ ರೀತಿ ನಾನು ಕೂಡ ಈ ಪ್ರಕರಣಕ್ಕೆ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣ ನಡೆಸಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ . ನ್ಯಾಯಾಯದಲ್ಲಿ ಹಾಜರು ಪಡಿಸಿದ ಯಾವ ದಾಖಲಾತಿಗಳಲ್ಲಿ ಇರುವ ಬರವಣಿಗೆ ಆರೊಪಿಯದ್ದಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.